**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 571/2024**

**ಚಾ.ಸಾಃ 10, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಗಣೇಶ ನಾಯ್ಕ |
| ತಂದೆಯ ಹೆಸರು | ಚಂದ್ರಹಾಸ ನಾಯ್ಕ |
| ವಯಸ್ಸು | 31 ವರ್ಷಗಳು |
| ಉದ್ಯೋಗ | ಸುಪರವೈಸರ್, ಕೆಪಿಸಿ, ಗೇರುಸೊಪ್ಪಾ (ಗುತ್ತಿಗೆ) |
| ವಾಸ್ತವ್ಯ | ನಗರಬಸ್ತಿಕೇರಿ, ಗೇರುಸೊಪ್ಪಾ |

**ಸಾಕ್ಷಿಯನ್ನು ದಿನಾಂಕಃ 29-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿದ್ದೇನೆ. 3 ನೇ ಆರೋಪಿ ದೂರದ ಸಂಬಂಧಿಕ.

ದಿನಾಂಕ 18-01-2024 ರಂದು ಹೊನ್ನಾವರದಿಂದ ಗೇರುಸೊಪ್ಪಾಕ್ಕೆ ಕೆಲವೊಂದು ಸಾಮಾನುಗಳನ್ನು ತೆಗೆದುಕೊಳ್ಳಲು 1 ನೇ ಆರೋಪಿಯ ಗೂಡ್ಸ ವಾಹನವನ್ನು ಬಾಡಿಗೆಗೆ ತೆಗೆದುಕೊಂಡಿದ್ದೆ. ಅದರಂತೆ ಸಾಮಾನುಗಳನ್ನು ಸಾಗಾಟ ಮಾಡಲು ಗೇರುಸೊಪ್ಪಾದಿಂದ ಹೊನ್ನಾವರಕ್ಕೆ ಬರುತ್ತಿದ್ದು ಸದರಿ ವಾಹನವನ್ನು 1 ನೇ ಆರೋಪಿ ಚಲಾಯಿಸುತ್ತಿದ್ದು ನಾನು ಆತನ ಪಕ್ಕದಲ್ಲಿ ಕುಳಿತಿದ್ದೆ. ಹೀಗೆ ಹೊನ್ನಾವರಕ್ಕೆ ಬರುವಾಗ ನಾನು ಮಲಗಿದ್ದು ಅಂಗಾರಗುಂಡಿ ಹತ್ತಿರ 1 ನೇ ಆರೋಪಿ ಗೂಡ್ಸ ವಾಹನಕ್ಕೆ ಬ್ರೆಕ್ ಹಾಕಿದಾಗ ಎಚ್ಚರ ಆಯಿತು. ಎದ್ದು ನೋಡಿದಾಗ ಗೂಡ್ಸ ವಾಹನವು ಗುಡ್ಡಕ್ಕೆ ಡಿಕ್ಕಿಪಡಿಸಿತ್ತು. ಆ ಸ್ಥಳದಲ್ಲಿ ಒಂದು ಬೈಕ್ ಬಿದ್ದಿತ್ತು. ನಂತರ ಏನಾಯಿತೋ ಗೊತ್ತಿಲ್ಲ. ಅಲ್ಲಿಂದ ನಾನು ವಾಪಸ್ಸು ಬಂದಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತದ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 18-01-2024 ರಂದು ಮಧ್ಯಾಹ್ನ 03-30 ರ ಸಮಯಕ್ಕೆ ಆರೋಪಿ ತಾನು ಚಲಾಯಿಸುತ್ತಿದ್ದ ಗೂಡ್ಸ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿ, ರಸ್ತೆಯ ಬಲಕ್ಕೆ ತಿರುಗಿಸಿ ಎದುರಿನಿಂದ ಬರುತ್ತಿದ್ದ ಒಂದು ಮೋಟಾರು ಸೈಕಲ್ಲಿಗೆ ಡಿಕ್ಕಿಪಡಿಸಿದ್ದು ಅಪಘಾತದ ರಭಸಕ್ಕೆ ಮೋಟಾರು ಸೈಕಲನಲ್ಲಿದ್ದ ಸವಾರ ಮತ್ತು ಹಿಂಬದಿ ಸವಾರರು ಇಬ್ಬರೂ ರಸ್ತೆಯ ಕಾಲುವೆಗೆ ಬಿದ್ದಿದ್ದು, ಆರೋಪಿ ವಾಹನವನ್ನು ಧರೆಗೆ ಡಿಕ್ಕಿ ಪಡಿಸಿದ್ದು ನಾನು ವಾಹನ ಇಳಿದು ನೋಡಲಾಗಿ ಬೈಕ್ ಸವಾರನ

ಬಲಕೈಗೆ ಮತ್ತು ಕಾಲಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಹಿಂಬದಿ ಸವಾರನ ತಲೆಗೆ ಮತ್ತು ಹೊಟ್ಟೆಗೆ ಗಂಭೀರ ಸ್ವರೂಪದ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿ ಗೂಡ್ಸ ವಾಹನವನ್ನು ಅತಿವೇಗ ಹಾಗೂ ನಿಷ್ಕಾಳಜಿಯಿಂದ ಚಲಾಯಿಸಿದ್ದರಿಂದಲೇ ಸದರಿ ಅಪಘಾತವಾಗಿದ್ದು ಅಪಘಾತವನ್ನು ನಾನು ಕಣ್ಣಾರೆ ನೋಡಿದ್ದು  ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–1 ಎಂದು ಗುರುತಿಸಲಾಯಿತು. ಅಪಘಾತವನ್ನು ಕಣ್ಣಾರೆ ನೋಡಿ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರು ಇಲ್ಲ ಎಂದು ಹೇಳಿರುತ್ತಾರೆ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**